# ಕರ್ನಾಟಕ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳ (ಪ್ರಕಟಣಾ ರಕ್ಷಣೆ) ಅಧಿನಿಯಮ, 1968

(ಕರ್ನಾಟಕ ರಾಜ್ಯಪತ್ರ, ಗುರುವಾರ ಏಪ್ರಿಲ್ 8, 2004 ಭಾಗ-4ಎ ಪುಟ 231 ರಿಂದ 232ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆ
3. ಕರ್ನಾಟಕ ರಾಜ್ಯ ವಿಧಾನ ಮಂಡಲದ ವ್ಯವಹರಣಾ ವರದಿಗಳ ಪ್ರಕಟಣೆಯು ವಿಶೇಷ ಹಕ್ಕುಳ್ಳದ್ದಾಗಿರುವುದು
4. ವೈರ್‌ಲೆಸ್ ಟೆಲಿಗ್ರಫಿ ಮೂಲಕ ಕರ್ನಾಟಕ ವಿಧಾನ ಮಂಡಲದ ವ್ಯವಹರಣೆಗಳ ಪ್ರಸಾರಕ್ಕೂ ಸಹ ಈ ಅಧಿನಿಯಮವು ಅನ್ವಯಿಸುವುದು

* * *

# 1968ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 20

(1968ರ ಡಿಸೆಂಬರ್ ಹತ್ತೊಂಬತ್ತನೇ ದಿನದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲಾಯಿತು)

# [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳ (ಪ್ರಕಟಣಾ ರಕ್ಷಣೆ) ಅಧಿನಿಯಮ, 1968

(1968ರ ಡಿಸೆಂಬರ್ ಮೂರನೇ ದಿನದಂದು ರಾಷ್ಟ್ರಪತಿಯವರ ಒಪ್ಪಿಗೆ ಪಡೆಯಲಾಗಿದೆ)

[2][1976ರ ಅಧಿನಿಯಮ ಸಂಖ್ಯೆ 1ರ ಮೂಲಕ ನಿರ್ದಿಷ್ಟ ಅವಧಿಯವರೆಗೆ ನಿರಸನಗೊಳಿಸಲಾಗಿದೆ][2]

**[1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದ ವ್ಯವಹರಣಾ ವರದಿಗಳ ಪ್ರಕಟಣೆಯನ್ನು ರಕ್ಷಿಸುವ ಅಧಿನಿಯಮ.**

[1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದ ವ್ಯವಹರಣಾ ವರದಿಗಳ ಪ್ರಕಟಣೆಯನ್ನು ರಕ್ಷಿಸುವುದು ವಿಹಿತವಾಗಿರುವುದರಿಂದ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ಅಳವಡಿಸಲಾಗಿದೆ (1.11.1973)

2. ಈ ಅಧಿನಿಯಮವು ದಿನಾಂಕ 25ನೇ ಜೂನ್ 1975ರಂದು ಘೋಷಿಸಲ್ಪಟ್ಟ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಮಾತ್ರ ನಿರಸನಗೊಂಡಿದೆ.

ಭಾರತ ಗಣರಾಜ್ಯದ ಹತ್ತೊಂಬತ್ತನೇ ವರ್ಷದಲ್ಲಿ ಇದನ್ನು ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳ (ಪ್ರಕಟಣಾ ರಕ್ಷಣೆ) ಅಧಿನಿಯಮ, 1968 ಎಂದು ಕರೆಯತಕ್ಕದ್ದು.

(2) ಇದು [1][ಕರ್ನಾಟಕ][1] ರಾಜ್ಯದಾದ್ಯಂತ ವ್ಯಾಪ್ತವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ಅಳವಡಿಸಲಾಗಿದೆ (1.11.1973)

**2. ಪರಿಭಾಷೆ.-** ಈ ಅಧಿನಿಯಮದಲ್ಲಿ "ವೃತ್ತಪತ್ರಿಕೆ" ಎಂದರೆ, ಸಾರ್ವಜನಿಕ ವಾರ್ತೆಗಳನ್ನು ಅಥವಾ ಸಾರ್ವಜನಿಕ ವಾರ್ತೆಗಳ ಮೇಲಿನ ಟೀಕೆಗಳನ್ನು ಒಳಗೊಂಡ ಮುದ್ರಿತ ನಿಯತಕಾಲಿಕ ಕೃತಿ ಮತ್ತು ಇದರಲ್ಲಿ ವೃತ್ತಪತ್ರಿಕೆಯ ಪ್ರಕಟಣೆಗಾಗಿ ವಿಷಯಗಳನ್ನೊದಗಿಸುವ ಒಂದು ವಾರ್ತಾ ಸಂಸ್ಥೆಯೂ ಸೇರುತ್ತದೆ.

**3. [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದ ವ್ಯವಹರಣಾ ವರದಿಗಳ ಪ್ರಕಟಣೆಯು ವಿಶೇಷ ಹಕ್ಕುಳ್ಳದ್ದಾಗಿರುವುದು.-** (1) (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು ಯಾರೇ ವ್ಯಕ್ತಿಯು [1][ಕರ್ನಾಟಕ][1] ವಿಧಾನ ಮಂಡಲದ ಎರಡು ಸದನಗಳಲ್ಲಿ ಯಾವುದೇ ಸದನದ ಯಾವುದೇ ವ್ಯವಹರಣೆಯು ಗಣನೀಯವಾಗಿ ನೈಜವಾದ ವರದಿಯನ್ನು ಒಂದು ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದ್ದರ ಸಂಬಂಧದಲ್ಲಿ, ಯಾವುದೇ ನ್ಯಾಯಾಲಯದಲ್ಲಿ, ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ, ಅಂಥ ಪ್ರಕಟಣೆಯು ದುರುದ್ದೇಶ ಪ್ರೇರಿತವಾಗಿ ಮಾಡಲಾಗಿದೆ ಎಂದು ರುಜುವಾತಾದ ಹೊರತು, ಬದ್ಧನಾಗತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ಅಳವಡಿಸಲಾಗಿದೆ (1.11.1973)

(2) (1)ನೇ ಉಪ ಪ್ರಕರಣದಲ್ಲಿ ಇರುವುದಾವುದೂ ಸಾರ್ವಜನಿಕರ ಒಳಿತಿಗಾಗಿ ಇರದ ಯಾವುದೇ ವಿಷಯದ ಪ್ರಕಟಣೆಯನ್ನು ರಕ್ಷಿಸುವುದಾಗಿ ಅರ್ಥೈಸತಕ್ಕದ್ದಲ್ಲ.

**4. ವೈರ್‌ಲೆಸ್ ಟೆಲಿಗ್ರಫಿ ಮೂಲಕ [1][ಕರ್ನಾಟಕ][1] ವಿಧಾನ ಮಂಡಲದ ವ್ಯವಹರಣೆಗಳ ಪ್ರಸಾರಕ್ಕೂ ಸಹ ಈ ಅಧಿನಿಯಮವು ಅನ್ವಯಿಸುವುದು.–** ವೃತ್ತಪತ್ರಿಕೆಗಳು ಪ್ರಕಟಿಸಿದ ವರದಿಗಳು ಅಥವಾ ವಿಷಯಗಳ ಸಂಬಂಧದಲ್ಲಿ ಈ ಅಧಿನಿಯಮವು ಅನ್ವಯಿಸುವಂತೆಯೇ [1][ಕರ್ನಾಟಕ][1] ರಾಜ್ಯದೊಳಗಿರುವ ಪ್ರಸಾರ ಕೇಂದ್ರಗಳ ಮೂಲಕ ಒದಗಿಸುವ ಕಾರ್ಯಕ್ರಮ ಅಥವಾ ಸೇವೆಯ ಭಾಗವಾಗಿ ವೈರ್‌ಲೆಸ್ ಟೆಲಿಗ್ರಫಿ ಮೂಲಕ ಪ್ರಸಾರ ಮಾಡುವಂತಹ ವರದಿಗಳು ಅಥವಾ ವಿಷಯಗಳ ಸಂಬಂಧದಲ್ಲಿಯೂ ಸಹ ಈ ಅಧಿನಿಯಮವು ಅನ್ವಯಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ಅಳವಡಿಸಲಾಗಿದೆ (1.11.1973)

* * * *

The above translation of the Karnataka Legislature Proceedings (Protection of Publication) Act, 1968 (20 of 1968) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

Bangalore
Date: 20-11-2003

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ. ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.

RKB